ನೆರಳು, ಪ್ರತಿಬಿಂಬ... ಹಾಗೆಯೇ ಬಹಳಷ್ಟು ಸಲ ಮರೀಚಿಕೆ...'

'ಅಬ್ಬಬ್ಬಾ... ನೀನು ಸಾಮಾನ್ಯ ಕುಂಟ ಅಲ್ಲ ಬಿಡೂ... ಏನಯ್ಯಾ ನಿನ್ನ ಮೂಲ ವೃತ್ತಿ...?'

'ಪಿಶಾಚಿಗಳಿಗೆ ಯಾವ ವೃತ್ತಿಯಣ್ಣಾ. ನೀನು ಮಾಯಾವಿ ಅನ್ನುತ್ತೆ. ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದ ಬೆಸ್ತ ಎಂದು ಹೇಳಿದ್ದೆಯಲ್ಲಾ; ನಾನು ನಂಬಲಾರೆ. ವೇಷಗಾರನೇನು ನೀನು...?'

'ನನ್ನದ್ಯಾವ ವೇಷ ಅಣ್ಣಾ; ನಾನೊಂದು ಪಾತ್ರವೂ ಅಲ್ಲ... ಏನೂ ಅಲ್ಲ... ಶೂನ್ಯ...'. 'ನಂಬಬೌದೇ; ಮನುಷ್ಯನಾದ ನೀನು ಸಾವಿರಾರು ಸ್ವರೂಪದವನು ಅಂತೇನೋ ಹೇಳ್ತಾ ಇದ್ದೆ... ನಾನು ಶವವೋ, ನೀನು ಶವವೋ ಗೊತ್ತಾಗ್ತಾ ಇಲ್ಲವಲ್ಲಾ...' 'ಇಬ್ಬರೂ ಹೆಣ ಅಂತಾನೆ ತಿಳ್ಕಳಣ್ಣ... ಮನುಷ್ಯರಿಂದ ದೂರ ಬಂದಿದ್ದೀವಿ ಅನಿಸ್ತಾನೆ ಇಲ್ಲ. ನಿನಗೆ ಎಲ್ಲಾ ಗೊತ್ತಿದೆ ಅಲ್ಲೇನಣ್ಣಾ... ಕ್ಷಮಿಸು ಅಣ್ಣಾ' ಎಂದು ಮೌನವಾದ.

ಅಗಾಧವಾದ ಬಟಾಬಯಲು. ಭೂಮಿಯೇ ಇಳಿಜಾರಾಗಿ ಜಾರಿಕೊಂಡಂತಿತ್ತು. ಎಲ್ಲಿಯೂ ಒಂದು ಗಿಡ ಮರವಿಲ್ಲ. ಭಯಂಕರವಾಗಿ ಗುಡುಗಿತು. ಆಕಾಶದ ಆ ತುದಿಯಿಂದ ಈ ತನಕ ಮಿಂಚುಗಳು ನರ್ತಿಸಿದವು. ಮಾಯಾವಿ ಮಳೆ ಅದೆಲ್ಲಿ ಅವಿತ್ತಿತ್ತೋ. ಭೂಮಿ ಹುಟ್ಟುವ ಒಂದು ಕಾಲದಲ್ಲಿ ಇನ್ನೂರು ವರ್ಷಗಳ ತನಕ ಸತತ ಮಳೆ ಸುರಿಯುತ್ತಲೇ ಇತ್ತಂತೆ. ಆಗಿನ್ನೂ ಮನುಷ್ಯ ಹುಟ್ಟೇ ಇರಲಿಲ್ಲ. ಅಂತಹ ಮಳೆ ಅಲ್ಲ. ಆದರೆ ಸಮುದ್ರದ ಅಲೆಗಳು ಎದ್ದೆದ್ದು ಅಬ್ಬರಿಸಿ ಮಾಮೇರಿ ಮಳೆ ಬಂತು. ಕ್ಷಣಾರ್ಧದಲ್ಲಿ ಮಳೆ ಇಡೀ ಮರುಭೂಮಿಯನ್ನೇ ನುಂಗುವಂತೆ ಆವರಿಸಿತು. ಅವರು ಎಲ್ಲೂ ಬಚ್ಚಿಟ್ಟುಕೊಳ್ಳಲು ಸಾಧ್ಯವೇ ಇರಲಿಲ್ಲ. ಹುಚ್ಚರು. ಅಂತಹ ಮಳೆಗಾಗಿಯೇ ಕಾದಿದ್ದೆವು ಎಂದು ಮಳೆಯಲ್ಲಿ ಕುಣಿದರು. ಅಲ್ಲಿ ಕಾಲ, ದೇಶವೇ ಇಲ್ಲ ಎಂಬಂತೆ ಮಳೆಯ ಆರ್ಭಟ ಸಾಗಿತ್ತು. ಇಡೀ ರಾತ್ರಿ ಸುರಿಯಿತು. ಬೆಳಗಾಗಿತ್ತು. ಅವರಿಗೆ ಏನಾಗಿತ್ತೋ ಏನೋ... ಅವರ ಶವ ವಾಹನವೇ ಹೆಣದಂತೆ ಸುತ್ತುವರಿದ ಜಲರಾಶಿಯಲ್ಲಿ ತೇಲುತ್ತಿತ್ತು.

'ಅಣ್ಣಾ; ನಾವು ಈಗ ಎಲ್ಲಿದ್ದೇವೆ' ಎಂದು ಕುಂಟ ಕೇಳಿದ. 'ಸಾವಿನ ಹುಚ್ಚು ಮಳೆಯ ಹುಚ್ಚು ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದೇವೆ...' 'ಇಲ್ಲ ಇಲ್ಲಾಣ್ಣಾ... ಇದು ಜೀವ ಕೊಡುವ ಪ್ರವಾಹ...' 'ಹೌದು ಹೌದು... ಅಳತೆ ತಪ್ಪಿದರೆ ಕೊಚ್ಚಿ ಹೋಗುತ್ತೇವೆ. ಪ್ರವಾಹ ಇಳಿಯಲಿ ಸುಮ್ಮನಿರು' ಎಂದ ಸವಾರ.

ಅದೋ ಉಕ್ಕುಕ್ಕಿ ಧುಮ್ಮಿಕ್ಕಿ ಮಂಡಲ ಮಂಡಲವಾಗಿ ಎದ್ದೆದ್ದು ಒದ್ದುಕೊಂಡು ನುಗ್ಗಿ ಬರುತ್ತಿತ್ತು. ಮರುಭೂಮಿಯ ವಿಸ್ತಾರ ಬಯಲೆಲ್ಲವೂ ನದಿಯಾಗಿ ಹರಿಯುತ್ತಿದಂತ್ತಿತ್ತು. ಆಚೆ ದಂಡೆಗೆ ಹೋಗುವ ತವಕದಲ್ಲಿ ಮೂರು ದಿನ ಕಾದು ಕೂತರು. ಆಳವಿಲ್ಲದ ಬಯಲು ನದಿ ಎನಿಸಿತು. ಏನು ಮಾಡೋಣ ಎಂದು ಕೇಳಿದ. ಹಿಂತಿರುಗುವ ಮಾತೇ ಇಲ್ಲಣ್ಣ. ನುಗ್ಗಿಸು ನದಿಯ ಒಳಕ್ಕೇ. ಮುಳುಗಿದರೆ ಅದರಲ್ಲೇ ಹೊರಟು ಹೋಗಿ ಬಿಡುವ. ನಮ್ಮನ್ನು ಕರೆದುಕೊಂಡು ಹೋಗಲು ಬಂದಂತಿರುವ ಪ್ರವಾಹಕ್ಕೆ ಯಾಕೆ ನಿರಾಶೆ ಮಾಡಬೇಕು... ಮತ್ತೆ ಮಳೆ ಬರೋಥರಾ ಇದೆ. ನಮ್ಮ ದಾರಿಯ ನಾವು ಬಿಡ ಬಾರದು. ನೋಡೋಣ ಚಾಲು ಮಾಡಣ್ಣ ಗಾಡಿಯಾ; ಅದ್ಯಾಕೆ ಜಾಗ ಕೊಡಲ್ಲ ಅಂತ ನೋಡೇ ಬಿಡುವ ಎಂದು ಕುಂಟ ಹುರಿದುಂಬಿಸಿದ. ಎಲ್ಲ ಕಡೆಗಳ ದಾಟಿ ಬನ್ನಿ ಎಂಬಂತೆ ಆ ಕಡೆಯಿಂದ ದಿಗಂತ ಕೈ ಬೀಸಿ ಕರೆಯುತ್ತಲೇ ಇತ್ತು. ಆದರೆ ಹಾಗೆ ಮಳೆಯಲ್ಲಿ ಹಣ್ಣಾದ ಗಾಡಿಯ ಗಾಲಿಗಳು ಬದಿ ನೀರಲ್ಲಿ ಕಚ್ಚಿಕೊಂಡಿದ್ದವು. ಇನ್ನು ಎಂಜಿನ್ ಅನ್ನು ಬಡಿದೆಬ್ಬಿಸುವುದು ಹೇಗೆಂದು ಸವಾರ ಮತ್ತೆಮತ್ತೆ ಚಾಲು ಮಾಡುತ್ತಿದ್ದ. ಚಕ್ರಗಳು ಉಸುಕಿನಲ್ಲಿ ಸಿಲುಕಿ ಸುತ್ತುವರಿಯುತ್ತಿದ್ದವು. ಪಿಶಾಚಿಯಂತೆ ಕಿರುಚುತ್ತಿತ್ತು. ಕುಂಟ ಚಕ್ರಗಳು ಮುನ್ನುಗ್ಗಲು ಕಲ್ಲುಗಳ ಆಯ್ದು ತಂದು ಹಾಕಿ ತಾನೂ ಕಿಚ್ಚೆಲ್ಲ ಕೊಚ್ಚಿ ಬರುವಂತೆ ಅಬ್ಬರಿಸುತ್ತಿದ್ದ. ಭಾಗಶಃ ತನಗಿಂತಲೂ ಬಲವಾದ ಪಿಶಾಚಿಯೇ ಬಂದು ಬಿಟ್ಟಿತು ಎಂಬಂತೆ ಗಾಡಿ ಕಿತ್ತು ಕೊಂಡು ಮುನ್ನುಗ್ಗಿತು. ಕುಂಟ ನೆಗೆದು ವಾಹನವೇರಿದ. ಸವಾರ ಆ ಪ್ರವಾಹದ ಒಳಕ್ಕೇ ಗಾಡಿಯ ಡಿಕ್ಕಿ ಹೊಡೆಸುವಂತೆ ಎಕ್ಸಲೇಟರ್ ಬಲವಾಗಿ ಒತ್ತಿದ. ರಭಸವಾಗಿ ಅಲೆಗಳ ಮೇಲೆ ತೇಲಿ ಹೋಯಿತು. ಮುಳುಗಲೇ ಇಲ್ಲ. ಅಲೆ ಅಲೆಗಳ ಮೇಲೆ ಗಾಡಿ ತೇಲುತ್ತಾ ಪ್ರವಾಹ ಎಳೆದೊಯ್ದಂತೆಲ್ಲ ಅತ್ತಿತ್ತ ಹರಿದಾಡಿಕೊಂಡು ತನ್ನ ಗುರಿಯತ್ತ